ಮಾಧ್ಯಮಗಳಿಗೆ ಮಾಹಿತಿ 12th April 2013

# ಕರ್ನಾಟಕ ಚುನಾವಣಾ ಕಾವಲು (KEW)

## *ಕರ್ನಾಟಕ 2013 ವಿಧಾನ ಸಭಾ ಚುನಾವಣೆಗಳು – ಮೊದಲ ಪಟ್ಟಿಯ ಅಭ್ಯರ್ಥಿಗಳ ಹಿನ್ನೆಲೆ ವಿಶ್ಲೇಷಣೆ (ಬಿ.ಜೆ.ಪಿ. ಮತ್ತು ಐ.ಎನ್.ಸಿ)*

ಕರ್ನಾಟಕ ಚುನಾವಣಾ ಕಾವಲು (KEW) ರಾಜ್ಯಮಟ್ಟದ ರಾಜಕೀಯೇತರ, ಪಕ್ಷೇತರ ನಾಗರಿಕರು ಮತ್ತು ನಾಗರೀಕ ಸಮುದಾಯಗಳ ಸಂಘಟನೆಯಾಗಿದೆ. ರಾಜ್ಯದ ಬಹುತೇಕ ಜಿಲ್ಲೆಗಳ ಪ್ರಾತಿನಿಧ್ಯವನ್ನು ಕೆ.ಇ.ಡಬ್ಲ್ಯು. ಹೊಂದಿದೆ. ಭಾರತದಲ್ಲಿ ಚುನಾವಣಾ ಸುಧಾರಣೆ, ಪ್ರಜಾಪ್ರಭುತ್ವ ಮತ್ತು ಆಡಳಿತದಲ್ಲಿ ಸುಧಾರಣೆ ಮಾಡಲು ಶ್ರಮಿಸುತ್ತಿರುವ ಇದಕ್ಕೆ ನಾಡಿನ ಖ್ಯಾತಿವೆತ್ತರು ಸಲಹಾಗಾರರಾಗಿದ್ದಾರೆ. 2013ರ ವಿಧಾನ ಸಭಾ ಚುನಾವಣೆಗೆ ವಿವಿಧ ರಾಜಕೀಯ ಪಕ್ಷಗಳು ತಮ್ಮ ಸ್ಪರ್ಧಾಳುಗಳನ್ನು ಘೋಷಿಸಿದ್ದು, ಕೆ.ಇ.ಡಬ್ಲ್ಯು ಅವರ ಹಿನ್ನೆಲೆಯ ವಿಚಾರಗಳನ್ನು ಅಭ್ಯಯಿಸಿ ಅನುಸರಿಸುತ್ತಿದೆ. ರಾಜಕೀಯ ಪಕ್ಷಗಳು ಚುನಾವಣೆಗಾಗಿ ಘೋಷಿಸಿರುವ ಮೊದಲು ಸುತ್ತಿನ ಅಭ್ಯರ್ಥಿಗಳ ಹಿಂದಿನ ವಿವಿಧ ದಾಖಲೆಗಳನ್ನು, ಹಿಂದಿನ ಚುನಾವಣೆ ಸಂದರ್ಭದಲ್ಲಿ ಸ್ವಯಂಘೋಷಿತ ವಿವರಗಳನ್ನು (affidavits) ಪ್ರಜಾಸತ್ತೀಯ ಸುಧಾರಣೆಗಾಗಿ ಸಂಘಟನೆ [Association for Democratic Reforms (ADR)] ಮತ್ತು ಕರ್ನಾಟಕ ಚುನಾವಣಾ ಕಾವಲು (KEW) ಜಂಟಿಯಾಗಿ ಪರಿಶೀಲಿಸಿದೆ. ಅವುಗಳನ್ನು ಆಧರಿಸಿ, ಈ ಬಾರಿ ಕರ್ನಾಟಕ ವಿಧಾನ ಸಭಾ ಚುನಾವಣೆಗೆ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಹಿನ್ನೆಲೆಯನ್ನು ಅವರೇ ಘೋಷಿಸಿಕೊಂಡಿದ್ದಂತಹ ಆರ್ಥಿಕ ಸ್ಥಿತಿಗತಿ, ಅಪರಾಧಿಕ ಮೊಕದ್ದಮ್ಮೆಗಳ ವಿವರಗಳನ್ನು ಕರ್ನಾಟಕ ಚುನಾವಣಾ ಕಾವಲು ವಿಶ್ಲೇಷಿಸಿದೆ.

**ಈ ವಿಶ್ಲೇಷಣೆಯನ್ನು ಮಾಡಲು ಕರ್ನಾಟಕ ಚುನಾವಣಾ ಕಾವಲಿಗೆ ಮಾಹಿತಿ ನೀಡಿರುವ ವಿವಿಧ ಜನ ಸಂಘಟನೆಗಳಾದ, ಕರ್ನಾಟಕ ಸಾಮಾಜಿಕ ಕಾವಲು (ರಾಷ್ಟ್ರೀಯ ಸಾಮಾಜಿಕ ಕಾವಲಿನ ಭಾಗ) ಒದಗಿಸಿದ ಕರ್ನಾಟಕ ಸಾಮಾಜಿಕ ಕಾವಲು ವರದಿ 2012, ದಕ್ಷ್ ಮತ್ತು ಚೈಲ್ಡ್ ರೈಟ್ಸ್ ಟ್ರಸ್ಟ್ ಹಾಗೂ ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ – KCRO [(ಶಾಸಕರ ಸಾಧನೆ 2008–12), ಶಾಸನ ಸಭೆಗೆ ಹಾಜರಾತಿ ಮತ್ತು ವಿಧಾನ ಸಭೆಯಲ್ಲಿ ಕೇಳಿದ ಪ್ರಶ್ನೆಗಳು] ಮತ್ತಿತರ ಸ್ವಯಂಸೇವಕರಿಗೆ ನಾವು ಆಭಾರಿಗಳು.**

**ಚುನಾವಣೆಗೆ ಅಭ್ಯರ್ಥಿಗಳನ್ನು ಘೋಷಿಸಿರುವ ಮೊದಲ ಪಟ್ಟಿಯಲ್ಲಿರುವಂತೆ :**

- **ಕರ್ನಾಟಕ 2013ರ ವಿಧಾನ ಸಭೆಗೆ ಬಿ.ಜೆ.ಪಿ ಘೋಷಿಸಿರುವ 140 ಅಭ್ಯರ್ಥಿಗಳು**
- **ಕರ್ನಾಟಕ 2013ರ ವಿಧಾನ ಸಭೆಗೆ ಐ.ಎನ್.ಸಿ. ಘೋಷಿಸಿರುವ 177 ಅಭ್ಯರ್ಥಿಗಳು**

***ಗಮನಿಸಿ: ಈ ವಿಶ್ಲೇಷಣೆಯು 2008ರಲ್ಲಿ ಅಭ್ಯರ್ಥಿಗಳು ಇತ್ತಿರುವ ಸ್ವಯಂಘೋಷಣಾ ಮಾಹಿತಿಯನ್ನು ಆಧರಿಸಿದೆ. ಆ ನಂತರ ಕೆಲವು ಶಾಸಕರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರಬಹುದು ಅಥವಾ ಪಕ್ಷ ಬದಲಾಯಿಸಿರಬಹುದು. ತೀರಾ ಇತ್ತೀಚಿನ ಆಸ್ತಿ, ಸಾಲ ವಿವರ, ಮತ್ತು ಅಪರಾಧಿಕ ಮೊಕದ್ದಮ್ಮೆಗಳು ಈಗ ಲಭ್ಯವಿಲ್ಲ. ಆದಾಗ್ಯೂ, 2008ರಲ್ಲಿ ಅಭ್ಯರ್ಥಿಗಳೇ ನೀಡಿದ್ದ ಮಾಹಿತಿ ಆಧರಿಸಿ ಈ ವಿಶ್ಲೇಷಣೆಯನ್ನು ಮಾಡಲಾಗಿದೆ.***

- **ಪ್ರಮುಖ ರಾಜಕೀಯ ಪಕ್ಷಗಳಾದ ಬಿ.ಜೆ.ಪಿ. ಮತ್ತು ಐ.ಎನ್.ಸಿ. ಒಟ್ಟು 317 ಅಭ್ಯರ್ಥಿಗಳನ್ನು ತಮ್ಮ ಮೊದಲ ಪಟ್ಟಿಯಲ್ಲಿ ಪ್ರಕಟಿಸಿವೆ.**

- ಇವರಲ್ಲಿ **ಬಿ.ಜೆ.ಪಿ.ಯ 140 ಅಭ್ಯಥಿಗಳಲ್ಲಿ 85 ಅಭ್ಯರ್ಥಿಗಳದ್ದು** ಮತ್ತು **ಐ.ಎನ್.ಸಿ.ಯ ಒಟ್ಟು 177 ಅಭ್ಯರ್ಥಿಗಳಲ್ಲಿ 109** ಅಭ್ಯರ್ಥಿಗಳು ಈ ಹಿಂದೆ 2008ರಲ್ಲಿ ಸಲ್ಲಿಸಿದ್ದ ಸ್ವಯಂಘೋಷಣಾ ಪತ್ರದ ವಿವರಗಳು ಲಭ್ಯವಿದೆ. ಒಟ್ಟು 194 ಅಭ್ಯರ್ಥಿಗಳ ಲಭ್ಯ ಮಾಹಿತಿಯನ್ನನುಸರಿಸಿ ವಿಶ್ಲೇಷಣೆ ಮಾಡಲಾಗಿದೆ

- ಒಟ್ಟು 317 ಘೋಷಿತ ಅಭ್ಯರ್ಥಿಗಳಲ್ಲಿ 130 ಅಭ್ಯರ್ಥಿಗಳು (41%) ಈ ಹಿಂದೆ ಶಾಸಕರಾಗಿದ್ದು ಮರು ಆಯ್ಕೆ ಬಯಸಿ ಸ್ಪರ್ಧೆಗಿಳಿಯುತ್ತಿದ್ದಾರೆ.

- ಬಿ.ಜೆ.ಪಿ. ಘೋಷಿಸಿರುವ ಮೊದಲ ಪಟ್ಟಿಯಲ್ಲಿನ 140 ಅಭ್ಯರ್ಥಿಗಳಲ್ಲಿ 72 ಅಭ್ಯರ್ಥಿಗಳು (51%) ಈಗಿನ ವಿಧಾನ ಸಭೆಯಲ್ಲಿದ್ದು ಮರು ಆಯ್ಕೆ ಬಯಸಿದ್ದಾರೆ. ಐ.ಎನ್.ಸಿ. ಮೊದಲ ಪಟ್ಟಿಯಲ್ಲಿ ಘೋಷಿಸಿರುವ 177 ಅಭ್ಯರ್ಥಿಗಳಲ್ಲಿ 58 ಅಭ್ಯರ್ಥಿಗಳು (33%) ಈಗ ಶಾಸಕರಾಗಿದ್ದು ಮರು ಆಯ್ಕೆಗೆ ಸ್ಪರ್ಧಿಸುತ್ತಿದ್ದಾರೆ.

- ಈಗ ಲಭ್ಯವಿರುವ ಹಿಂದಿನ ಚುನಾವಣ ಸಂದರ್ಭದಲ್ಲಿನ ಸ್ವಯಂಘೋಷಣಾ ಪತ್ರಗಳಂತೆ ಒಟ್ಟು 194 ಅಭ್ಯರ್ಥಿಗಳಲ್ಲಿ 40 ಅಭ್ಯರ್ಥಿಗಳು ಕೊಟ್ಟಿರುವ ಘೋಷಣಾ ಪತ್ರಗಳಂತೆ ಅವರುಗಳು ತಮ್ಮ ಮೇಲೆ ಆಪರಾಧಿಕ ಮೊಕದ್ದಮ್ಮೆಗಳಿವೆಯೆಂದು ಹೇಳಿಕೊಂಡಿದ್ದಾರೆ.

- ಬಿ.ಜೆ.ಪಿ.ಯ 85 ಅಭ್ಯರ್ಥಿಗಳಲ್ಲಿ 24 (ಅಥವಾ 28%) ಮತ್ತು ಐ.ಎನ್.ಸಿ.ಯ 109 ಅಭ್ಯರ್ಥಿಗಳಲ್ಲಿ 16 (ಅಥವಾ 15%) ತಮ್ಮ ಮೇಲೆ ಆಪರಾಧಿಕ ಮೊಕದ್ದಮ್ಮೆಗಳಿವೆಯೆಂದು ಈ ಹಿಂದೆ ಘೋಷಿಸಿಕೊಂಡಿದ್ದಾರೆ.

- ಈ ಹಿಂದೆ ಘೋಷಿಸಿಕೊಂಡಿರುವಂತೆ 16 ಅಭ್ಯರ್ಥಿಗಳು ತಮ್ಮ ಮೇಲೆ ತೀವ್ರ ಸ್ವರೂಪದ ಕೊಲೆ, ಕೊಲೆ ಯತ್ನ, ಅಪಹರಣ, ಇತ್ಯಾದಿ ತರದ ಆಪರಾಧಿಕ ಆಪಾದನೆಗಳು ಇವೆ ಎಂದು ಹೇಳಿಕೊಂಡಿದ್ದಾರೆ – ಬಿ.ಜೆ.ಪಿಯ 10 ಮತ್ತು ಐ.ಎನ್.ಸಿ.ಯ 6 ಅಭ್ಯರ್ಥಿಗಳು.

- ಬಿ.ಜೆ.ಪಿ. ಮತ್ತು ಐ.ಎನ್.ಸಿ.ಯ ಮೊದಲ ಅಭ್ಯರ್ಥಿಗಳ ಪಟ್ಟಿಯಲ್ಲಿನ 194 ಅಭ್ಯರ್ಥಿಗಳು ಈ ಹಿಂದೆ ನೀಡಿದ್ದ ಸ್ವಯಂಘೋಷಣೆಯ ಆಧಾರದಲ್ಲಿ, ಭಾಲ್ಕಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆಗಿಳಿಯುತ್ತಿರುವ ಐ.ಎನ್.ಸಿ.ಯ ಈಶ್ವರ ಭೀಮಣ್ಣ ಖಂಡ್ರೆ ಅವರು ತಮ್ಮ ಮೇಲೆ 4 ಮೊಕದ್ದಮ್ಮೆಗಳು – ಕೊಲೆ, ಕೊಲೆ ಯತ್ನ, ಇತ್ಯಾದಿ ಇವೆ ಎಂದು ಘೋಷಿಸಿಕೊಂಡಿದ್ದಾರೆ. ಅರಭಾವಿಯ ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧೆಗಿಳಿಯುತ್ತಿರುವ ಬಿ.ಜೆ.ಪಿಯ ಬಾಲಚಂದ್ರ ಲಕ್ಷ್ಮಣರಾವ್ ಜಾರಖಿಹೊಳಿ ತಮ್ಮ ಮೇಲೆ 1 ಮೊಕದ್ದಮ್ಮೆ – ಕೊಲೆ, ಕೊಲೆ ಯತ್ನ ಮತ್ತು ಅಪಹರಣ ಇತ್ಯಾದಿ ಇದೆ ಎಂದು ಘೋಷಿಸಿಕೊಂಡಿದ್ದಾರೆ. ಐ.ಎನ್.ಸಿ ಮೂಲಕ ಯಂಕನ್ಮರಡಿ ಕ್ಷೇತ್ರದಿಂದ ಸ್ಪರ್ಧೆಗಿಳಿಯುತ್ತಿರುವ ಐ.ಎನ್.ಸಿ.ಯ ಜಾರಕಿಹೊಳಿ ಸತೀಷ್ ಲಕ್ಷ್ಮಣರಾವ್ ತಮ್ಮ ಮೇಲೆ 1 ಮೊಕದ್ದಮ್ಮೆಯಿದೆಯೆಂದು–ಕೊಲೆ, ಅಪಹರಣ ಮತ್ತು ಕೊಲೆಯತ್ನ– ಘೋಷಿಸಿಕೊಂಸಿದ್ದಾರೆ

- ಬಿ.ಜೆ.ಪಿ ಮತ್ತು ಐ.ಎನ್.ಸಿಯಿಂದ ಮೊದಲ ಪಟ್ಟಿಯಲ್ಲಿರುವ 194 ಅಭ್ಯರ್ಥಿಗಳಲ್ಲಿ 113 ಅಥವಾ 58% ಸ್ಪರ್ಧಿಗಳು ಹಿಂದಿನ ಘೋಷಣೆಯಂತೆ ಕೋಟ್ಯಧಿಪತಿಗಳಾಗಿದ್ದರು.

- ಬಿ.ಜೆ.ಪಿಯ 85 ಅಭ್ಯರ್ಥಿಗಳಲ್ಲಿ 44 (52%) ಮತ್ತು ಐ.ಎನ್.ಸಿ.ಯ 109 ಅಭ್ಯರ್ಥಿಗಳಲ್ಲಿ 69 (63%) ಹಿಂದೆ ನೀಡಿದ್ದ ಸ್ವಯಂ ಘೋಷಣೆಯಂತೆ ಕೊಟ್ಯಧಿಪತಿಗಳಾಗಿದ್ದರು.

- ಒಟ್ಟೂ 194 ಅಭ್ಯರ್ಥಿಗಳಲ್ಲಿ ಹಿಂದೆ ನೀಡಿದ್ದ ಘೋಷಣಾ ಪತ್ರದ ಮಾಹಿತಿಯಂತೆ (2008) ಐ.ಎನ್.ಸಿ.ಯ ಹಳಿಯಾಳ ಕ್ಷೇತ್ರದ ದೇಶಪಾಂಡೆ ರಘುನಾಥ ವಿಶ್ವನಾಥ್ ಅತಿ ಹೆಚ್ಚಿನ ಆಸ್ತಿ (ರೂ. 145.57 ಕೋಟಿ)

ಘೋಷಿಸಿಕೊಂಡಿದ್ದಾರೆ. ವಿಜಯನಗರ ಕ್ಷೇತ್ರದ ಐ.ಎನ್.ಸಿಯ ಎಂ.ಕೃಷ್ಣಪ್ಪ (ರೂ.129. 32 ಕೋಟಿ) ಮತ್ತು ಶಾಂತಿನಗರ ಕ್ಷೇತ್ರದ ಎನ್.ಎ. ಹ್ಯಾರಿಸ್ (ರೂ. 85.34 ಕೋಟಿ) ನಂತರದ ಸ್ಥಾನದಲ್ಲಿದ್ದಾರೆ. ಬಿ.ಜೆ.ಪಿಯ ಅಭ್ಯರ್ಥಿಗಳಲ್ಲಿ ಕೆ.ಆರ್.ಪುರದಿಂದ ಸ್ಪರ್ಧಿಸಲಿರುವ ಎನ್.ಎಸ್. ನಂದೀಶ್ ರೆಡ್ಡಿ ಅತ್ಯಂತ ಹೆಚ್ಚಿನ ಆಸ್ತಿ (ರೂ. 36.24 ಕೋಟಿ) ಘೋಷಿಸಿಕೊಂಡಿದ್ದಾರೆ.

**ರಾಜಕೀಯ ಪಕ್ಷಗಳ ವಿವಿಧ ಅಭ್ಯರ್ಥಿಗಳು ನೀಡಿರುವ ಮಾಹಿತಿ ವಿಶ್ಲೇಷಣೆಯ ಸಂಗ್ರಹಿತ ಪಟ್ಟಿ :**

| ಪಕ್ಷ | ಮೊದಲ ಪಟ್ಟಿಯಲ್ಲಿನ ಅಭ್ಯರ್ಥಿಗಳ ಸಂಖ್ಯೆ | ಮರು ಆಯ್ಕೆ ಬಯಸುತ್ತಿರುವ ಶಾಸಕರು | ಮತ್ತೆ ಸ್ಪರ್ಧಿಸುತ್ತಿರುವ ಶಾಸಕರ ಶೇ. | ಸ್ವಯಂಘೋಷಣಾ ಪತ್ರಗಳ ಲಭ್ಯತೆ ಮತ್ತು ವಿಶ್ಲೇಷಣೆ | ಕೋಟ್ಯಧಿಪತಿ ಅಭ್ಯರ್ಥಿಗಳು | ಕೋಟ್ಯಧಿಪತಿಗಳ ಶೇಕಡಾವಾರು. | ಅಪರಾಧಿಕ ಮೊಕದ್ದಮ್ಮೆಗಳನ್ನು ಘೋಷಿಸಿಕೊಂಡಿರುವ ಅಭ್ಯರ್ಥಿಗಳು | ತಮ್ಮ ವಿರುದ್ಧ ತೀವ್ರ ಸ್ವರೂಪದ ಆಪಾದನೆಗಳಿವೆಯೆಂದು ಘೋಷಿಸಿಕೊಂಡಿರುವವರು | ತೀವ್ರ ಆಪಾದನೆಗಳನ್ನು ಘೋಷಿಸಿಕೊಂಡಿರುವ ಅಭ್ಯರ್ಥಿಗಳ ಶೇಕಡಾವಾರು. |
|---|---|---|---|---|---|---|---|---|---|
| | | | | | | | | | |
| BJP | 140 | 72 | 51% | 85 | 44 | 52% | 24 | 10 | 28% |
| INC | 177 | 58 | 33% | 109 | 69 | 63% | 16 | 6 | 15% |
| ಒಟ್ಟು | **317** | **130** | **41%** | **194** | **113** | **58%** | **40** | **16** | **21%** |

**Table: Summary of candidates in the 1st list of BJP and INC**

## *ಕರ್ನಾಟಕ ವಿಧಾನ ಸಭೆಯ ಅಧಿವೇಶನಗಳಲ್ಲಿ ಶಾಸಕರ ಹಾಜರಾತಿ ಮತ್ತು ಕೇಳಿರುವ ಪ್ರಶ್ನೆಗಳ ಸಂಖ್ಯೆ (2008–13)*

ಜನಪ್ರತಿನಿಧಿಗಳ ಅತ್ಯಂತ ಪ್ರಮುಖವಾದ ಕರ್ತವ್ಯ ಶಾಸ. ನ ಸಭೆಗಳಿಗೆ ಹಾಜರಾಗುವುದು. ಆದರೆ ನಮ್ಮ ಶಾಸಕರು ಮತ್ತು ಲೋಕಸಭೆಯ ಸದಸ್ಯರು ತೀರಾ ಕನಿಷ್ಟ ಸಂಖ್ಯೆಯ ದಿನಗಳನ್ನು (ವರ್ಷಕ್ಕೆ) ಇದಕ್ಕೆ ಮೀಸಲಿಡುತ್ತಿರುವುದು ಶೋಚನೀಯ. ಕರ್ನಾಟಕ ಚುನಾವಣಾ ಕಾವಲಿನ ಸದಸ್ಯ ಸಂಸ್ಥೆಗಳಾದ ಕರ್ನಾಟಕ ಸಾಮಾಜಿಕ ಕಾವಲು, ದಕ್ಷ, ಚೈಲ್ಡ್ ರೈಟ್ಸ್ ಟ್ರಸ್ಟ್ ಮತ್ತು ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ ನಡೆಸಿರುವ ಶಾಸಕರ ಹಾಜರಿ ಮತ್ತು ಕೇಳಿರುವ ಪ್ರಶ್ನೆಗಳ ವಿಶ್ಲೇಷಣೆ (ಕರ್ನಾಟಕ ವಿಧನ ಸಭೆ 2008–12) ಮೂಲಕ ಈ ಮುಂದಿನ ಮಾಹಿತಿ ನೀಡಲಾಗಿದೆ.

# ವಿಧಾನ ಸಭೆ ಮತ್ತು ಲೋಕಸಭೆಯಲ್ಲಿ ಅಧಿವೇಶನಗಳ ದಿನಗಳು

ಭಾರತದ ಲೋಕಸಭೆ ಮತ್ತು 9 ರಾಜ್ಯಗಳ ವಿಧಾನ ಸಭೆಗಳು ನಡೆಸಿರುವ ಅಧಿವೇಶನಗಳ ದಿನಗಳು

| ರಾಜ್ಯ ವಿಧಾನ ಸಭೆ | ಪರಿಗಣಿಸಲ್ಪಟ್ಟ ವರ್ಷಗಳ ಸಂಖ್ಯೆ | ಪರಿಗಣಿಸಲ್ಪಟ್ಟ ವರ್ಷಗಳು | ಒಟ್ಟು ಅಧಿವೇಶನಗಳ ಸಂಖ್ಯೆ | ಅಧಿವೇಶನಗಳು ನಡೆದ ಒಟ್ಟು ದಿನಗಳು | ವರ್ಷಕ್ಕೆ ನಡೆದ ಸರಾಸರಿ ಅಧಿವೇಶನ ದಿನಗಳು |
|---|---|---|---|---|---|
| ಕರ್ನಾಟಕ | 5 ವರ್ಷಗಳು | **2008-2012** | **16** | **164** | **33** |
| 15ನೆ ಲೋಕಸಭೆ | 4 ವರ್ಷಗಳು | 2009-2012 | 12 | 282 | **71** |
| ಗುಜರಾತ್ | 5 ವರ್ಷಗಳು | 2008-2012 | 10 | 156 | **31** |
| ಹಿಮಾಚಲ ಪ್ರದೇಶ | 5 ವರ್ಷಗಳು | 2008-2012 | 11 | 128 | **26** |
| ತ್ರಿಪುರಾ | 5 ವರ್ಷಗಳು | 2007-2012 | 13 | 78 | **16** |
| ಗೋವಾ (ಫೆ. '11ರವರೆಗೆ) | 4.5 ವರ್ಷಗಳು | 2007-2011 | 12 | 82 | **18** |
| ಮಣಿಪುರ (ಆ. '11ರವರೆಗೆ) | 4.5 ವರ್ಷಗಳು | 2007-2011 | 11 | 110 | **24** |
| ರಾಜಸ್ಥಾನ | 4 ವರ್ಷಗಳು | 2009-2012 | 9 | 97 | **24** |
| ಉತ್ತರ ಪ್ರದೇಶ (ಫೆ. '11ರವರೆಗೆ) | 4 ವಷಗಳು | 2007-2011 | 10 | 89 | **22** |
| ಪಂಜಾಬ್ (ಮಾ. '11ರವರೆಗೆ) | 4 years | 2007-2011 | 10 | 76 | **19** |
| ಉತ್ತರಖಂಡ (ಸೆ.'11ರವರೆಗೆ) | 3.5 ವರ್ಷಗಳು | 2007-2010 | 11 | 68 | **19** |

**Table: Average number of sittings of State Assemblies and Lok Sabha**

## ಕರ್ನಾಟಕ ಮತ್ತು ಇತರ ರಾಜ್ಯಗಳ ವಿಧಾನ ಸಭೆಗಳ ಸ್ಥಿತಿಗತಿ

- ಕರ್ನಾಟಕ ವಿಧಾನ ಸಭೆ 2008–13ರ 5 ವರ್ಷದ ಅವಧಿಯಲ್ಲಿ ವರ್ಷಕ್ಕೆ ಸರಾಸರಿ 33 ದಿನಗಳ ಅಧಿವೇಶನಗಳನ್ನು ನಡೆಸಿದೆ.
- ಲೋಕಸಭೆಯ ಕಛೇರಿಯಿಂದ ಬಂದಿರುವ ತೀರಾ ಇತ್ತೀಚಿನ ಮಾಹಿತಿಯಂತೆ ಭಾರತ ಲೋಕಸಭೆ 92009–12)ರ ಅವಧಿಯಲ್ಲಿ 12 ಅಧಿವೇಶನಗಳಲ್ಲಿ ಕೇವಲ 282 ದಿನಗಳನ್ನು ನಡೆಸಿದೆ, ವರ್ಷಕ್ಕೆ 71 ದಿನಗಳು.
- ಲೋಕಸಭೆ ಕಳೆದ 4 ವರ್ಷಗಳಲ್ಲಿ ನಡೆಸಿದ ಅಧಿವೇಶನಗಳ ಸಂಖ್ಯೆಗೆ ಹೋಲಿಸಿದರೆ ಕರ್ನಾಟಕ ವಿಧಾನಸಭೆಯಲ್ಲಿ ಕಳೆದ 5 ವರ್ಷಗಳಲ್ಲಿ ನಡೆದ ಸರಾಸರಿ ಅಧಿವೇಶನಗಳ ದಿನಗಳು ಬಹಳ ಕಡಿಮೆ
- ಬಹತೇಕ ಎಲ್ಲ ರಾಜ್ಯಗಳು ಸರಾಸರಿ 30 ದಿನಗಳ ಅಧಿವೇಶನ ನಡೆಸುವಲ್ಲೂ ಸೋತಿವೆ.

  * ಈ ವರದಿಯಲ್ಲಿ ಉಲ್ಲೇಖಿಸಲಾಗಿರುವ ಲೋಕಸಭೆಯ ಮತ್ತು ವಿಧಾನಸಭೆಗಳ ಅವಧಿಯ ದಿನಗಳಲ್ಲಿ ಅಧಿವೇಶನಗಳು ರದ್ದಾದ ಮತ್ತು ಅಧಿವೇಶನಕ್ಕೆ ಭಹಿಷ್ಕಾರ ಹಾಕುವುದರಿಂದ ರದ್ದಾದ ದಿನಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿಲ್ಲ. (ಅಂದರೆ, ಈ ಸಂಖ್ಯೆಯಲ್ಲಿ ಕಳೆದು ಹೋದ ಈ ದಿನಗಳೂ ಸೇರಿವೆ ಎಂಬುದನ್ನು ಗಮನಿಸಬೇಕು)

Data in this Kit is presented in good faith, with an intention to inform voters. Candidate's affidavit with nomination papers and information received under RTI is the source of this analysis. www.adrindia.org, www.myneta.info

ರಾಜಕೀಯ ಪಕ್ಷಗಳು ಚುನಾವಣೆಗೆ ಸ್ಪರ್ಧಿಗಳನ್ನು ಆರಿಸುವಾಗ ಯಾವ ಮಾಪಕಗಳನ್ನು ಗಣನೆಗೆ ತೆಗೆದುಕೊಳ್ಳುತ್ತವೆ ಎಂಬುದನ್ನು ಬಹಿರಂಗಪಡಿಸಬೇಕೆಂದು ಕರ್ನಾಟಕ ಚುನಾವಣಾ ಕಾವಲು ಸಮಿತಿ ಒತ್ತಾಯಿಸುತ್ತದೆ. ಇವುಗಳಲ್ಲಿ ಬಹಳ ಪ್ರಮುಖವಾಗಿ ಅಭ್ಯರ್ಥಿಗಳು ಶಾಸಕರಾಗಿ ಮಾಡಬೇಕಾದ ಕರ್ತವ್ಯಗಳನ್ನು ನಿರ್ವಹಿಸುವ ಸಾಮರ್ಥ್ಯದ ಬಗ್ಗೆ ಖಾತರಿ ಕೊಡುವುದು ಪ್ರಮುಖವಾಗಬೇಕು.

ಇದರ ಬದಲು ಬಹಳಷ್ಟು ಶಾಸಕರು ತಮ್ಮ ಸಂಬಳ, ಸಾರಿಗೆ, ಭತ್ಯೆ ಇತ್ಯಾದಿಗಳನ್ನು ಹೆಚ್ಚಿಸುವುದಕ್ಕೆ ಗೊತ್ತುವಳಿಗಳನ್ನು ಮಂಡಿಸುತ್ತಿರುವುದು ಮತ್ತು ಶಾಸಕರ ಪಾತ್ರ ಕರ್ತವ್ಯದ ಬಗ್ಗೆ ಚರ್ಚೆಯಾಗದಿರುವುದೇ ಆಗಿದೆ. ಶಾಸಕರ ಪಾತ್ರ ನಿರ್ವಹಣೆ ಗುಣಮಟ್ಟವನ್ನು ಹೆಚ್ಚಿಸುವಂತಹ ವಿವಿಧ ಮಾನದಂಡಗಳನ್ನೂ ರಾಜಕೀಯ ಪಕ್ಷಗಳು ತಮ್ಮ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆಯಲ್ಲಿ ಒಳಗೊಳ್ಳಬೇಕು. ಇದರೊಂದಿಗೆ ಎಲ್ಲ ರಾಜಕೀಯ ಪಕ್ಷಗಳು ತಾವು ಅಧಿಕಾರಕ್ಕೆ ಬಂದಾಗ ಜನರ ಶಾಸಕರ ಕಾರ್ಯನಿರ್ವಹಣೆ ಕುರಿತು ಜನರಿಗೆ ಸುಲಭವಾಗಿ ಮಾಹಿತಿ ದೊರಕುವಂತೆ ತಮ್ಮ ಅಧಿಕೃತ ಅಂತರ್ಜಾಲದಲ್ಲಿ (ವೆಬ್ ಸೈಟ್) ಪ್ರಕಟಿಸಬೇಕು.

**ಕರ್ನಾಟಕ ವಿಧಾನ ಸಭೆ 2008ರಲ್ಲಿ ಪ್ರಶ್ನೆಗಳನ್ನು ಕೇಳಿದ ಶಾಸಕರು**

- 2008ರಿಂದ 2012ರವರೆಗೆ ವಿಧಾನ ಸಭೆಯಲ್ಲಿ ಕರ್ನಾಟಕದ ಶಾಸಕರು ಒಟ್ಟು 8,571 ಪ್ರಶ್ನೆಗಳನ್ನು ಕೇಳಿದ್ದಾರೆ.

- ಆಡಳಿತ ಪಕ್ಷವಾಗಿದ್ದ ಬಿ.ಜೆ.ಪಿಯ 116 ಶಾಸಕರು ಒಟ್ಟು 2230 ಪ್ರಶ್ನೆಗಳನ್ನು (26%) ಕೇಳಿದ್ದಾರೆ, ಐ.ಎನ್.ಸಿ.ಯ 75 ಶಾಸಕರು 4,538 ಪ್ರಶ್ನೆಗಳನ್ನು (53%) ಕೇಳಿದ್ದಾರೆ, ಜೆ.ಡಿ (ಎಸ್)ನ 26 ಶಾಸಕರು 1,731 ಪ್ರಶ್ನೆಗಳು (20%) ಹಾಗೂ 8 ಸ್ವತಂತ್ರ ಶಾಸಕರು 72 ಪ್ರಶ್ನೆಗಳನ್ನು (1%) ಕೇಳಿದ್ದಾರೆ.

- 2008–12ರಲ್ಲಿ ಮಂಗಳೂರು ಕ್ಷೇತ್ರದ ಐ.ಎನ್.ಸಿಯ ಯು.ಟಿ. ಖಾದರ್ ಅತ್ಯಂತ ಹೆಚ್ಚಿನ ಪ್ರಶ್ನೆಗಳನ್ನು – 401 ಕೇಳಿದ್ದಾರೆ. ನಂತರದ ಸ್ಥಾನ ಭಾಲ್ಕಿಯ ಐ.ಎನ್.ಸಿ. ಯ ಈಶ್ವರ ಭೀಮಣ್ಣ ಖಂಡ್ರೆ (354 ಪ್ರಶ್ನೆಗಳು) ಮತ್ತು ಐ.ಎನ್.ಸಿಯ ಶಾಂತಿನಗರದ ಶಾಸಕ ಎನ್.ಎ. ಹ್ಯಾರೀಸ್ (331 ಪ್ರಶ್ನೆಗಳು) ಕೇಳಿದ್ದಾರೆ. ಅದೇರೀತಿ ಬಿ.ಜೆ.ಪಿಯ ಶಿವಮೊಗ್ಗ ಗ್ರಾಮೀಣ ಕ್ಷೇತ್ರದ ಕೆ.ಜಿ. ಕುಮಾರ ಸ್ವಾಮಿ 275 ಪ್ರಶ್ನೆಗಳನ್ನು ಕೇಳಿದ್ದರೆ, ಜೆ.ಡಿ (ಎಸ್)ನ ಚಿಕ್ಕನಾಯಕನಹಳ್ಳಿಯ ಸಿ.ಬಿ. ಸುರೇಶ್ ಬಾಬು 152 ಪ್ರಶ್ನೆಗಳನ್ನು ಕೇಳಿದ್ದಾರೆ.

- 2008–12ರ ವಿಧನ ಸಭಾ ಅಧಿವೇಶನಗಳಲ್ಲಿ 65 ಹಾಲಿ ಮತ್ತು ಮಾಜಿ ಸಚಿವರು ಒಂದೂ ಪ್ರಶ್ನೆಯನ್ನು ಕೇಳಿಲ್ಲ.

  2008–12ರ ಕರ್ನಾಟಕ ವಿಧಾನ ಸಭಾ ಅಧಿವೇಶನಗಳಲ್ಲಿ ವಿವಿಧ ರಾಜಕೀಯ ಪಕ್ಷಗಳು ಕೇಳಿದ ಪ್ರಶ್ನೆಗಳ ಸಂಖ್ಯೆ:

| ಕ್ರಮ ಸಂಖ್ಯೆ | ಪಕ್ಷ | ಶಾಸಕರ ಸಂಖ್ಯೆ | 2008–12ರ ವಿಧಾನ ಸಭಾ ಅಧಿವೇಶನದಲ್ಲಿ ಕೇಳಿದ ಒಟ್ಟು ಪ್ರಶ್ನೆಗಳು | ಸರಾಸರಿ ಪ್ರಶ್ನೆಗಳು |
|---|---|---|---|---|
| 1 | ಬಿ.ಜೆ.ಪಿ | 116 | 2230 | 26% |
| 2 | ಐ.ಎನ್.ಸಿ. | 75 | 4538 | 53% |
| 3 | ಜೆ.ಡಿ. (ಎಸ್) | 26 | 1731 | 20% |
| 4 | ಇತರೆ | 8 | 72 | 1% |
| ಒಟ್ಟು | | **225** | **8571** | |

**Table: Questions asked by MLAs – party wise**

## ಅತಿ ಹೆಚ್ಚು ಪ್ರಶ್ನೆಗಳನ್ನು ಕೇಳಿದ ಮೊದಲ 10 ಶಾಸಕರು (2008–12)

| ಕ್ರಮ ಸಂಖ್ಯೆ | ವಿಧಾನ ಸಭಾ ಕ್ಷೇತ್ರ | ಶಾಸಕರ ಹೆಸರು | ಪಕ್ಷ | 2008–12ರಲ್ಲಿ ಕೇಳಿದ ಒಟ್ಟು ಪ್ರಶ್ನೆಗಳು |
|---|---|---|---|---|
| 1 | ಮಂಗಳೂರು | ಯು.ಟಿ.ಖಾದರ್ | ಐ.ಎನ್.ಸಿ | 401 |
| 2 | ಭಾಲ್ಕಿ | ಈಶ್ವರ ಭೀಮಣ್ಣ ಖಂಡ್ರೆ | ಐ.ಎನ್.ಸಿ | 354 |
| 3 | ಶಾಂತಿ ನಗರ | ಎನ್.ಎ. ಹ್ಯಾರಿಸ್ | ಐ.ಎನ್.ಸಿ | 331 |
| 4 | ಶಿವಮೊಗ್ಗ ಗ್ರಾಮೀಣ | ಕೆ.ಜಿ. ಕುಮಾರಸ್ವಾಮಿ | ಬಿ.ಜೆ.ಪಿ | 275 |
| 5 | ಬೆಲ್ತಂಗಡಿ | ಕೆ. ವಸಂತ ಬಂಗೇರ | ಐ.ಎನ್.ಸಿ | 258 |
| 6 | ಮಹಾಲಕ್ಷ್ಮಿ ಲೇಔಟ್ | ಎನ್.ಎಲ್ ನರೇಂದ್ರ ಬಾಬು | ಐ.ಎನ್.ಸಿ | 219 |
| 7 | ಬಿ.ಟಿ.ಎಂ. ಲೇಔಟ್ | ರಾಮಲಿಂಗಾ ರೆಡ್ಡಿ | ಐ.ಎನ್.ಸಿ | 217 |
| 8 | ಇಂಡಿ | ಡಾ. ಬಗಲಿ ಸಾರ್ವಭೌಮ ಸಟಗೌಡ | ಬಿ.ಜೆ.ಪಿ | 188 |
| 9 | ತೇರದಾಳ | ಸಿದ್ದು ಸವದಿ | ಬಿ.ಜೆ.ಪಿ | 183 |
| 10 | ಬಾಗೇಪಲ್ಲಿ | ಎನ್. ಸಂಪಂಗಿ | ಐ.ಎನ್.ಸಿ | 178 |

**Table: Top 10 MLAs who asked maximum questions**

### *ಕರ್ನಾಟಕ ವಿಧಾನ ಸಭೆ ಚುನಾವಣೆ 2008ರ ಸಮಯದಲ್ಲಿ ಅಭ್ಯರ್ಥಿಗಳ ಸ್ವಯಂಘೋಷಣಾ ಪತ್ರದಲ್ಲಿ ನೀಡಿದ್ದ ಮಾಹಿತಿ ಪ್ರಕಾರ ಅವರ ಮೇಲಿದ್ದ ಅಪರಾಧಿಕ ಮೊಕದ್ದಮ್ಮೆಗಳು, ಹಣಕಾಸು ಮತ್ತು ಇತರ ಮಾಹಿತಿಗಳ ವಿಶ್ಲೇಷಣೆ*

2008ರ ಕರ್ನಾಟಕ ವಿಧಾನ ಸಭೆ ಚುನಾವಣಾ ಸಮಯದಲ್ಲಿ ಕರ್ನಾಟಕ ಚುನಾವಣಾ ಕಾವಲು ಒಟ್ಟು 215 ಅಭ್ಯರ್ಥಿಗಳ ಸ್ವಯಂಘೋಷಣಾ ಪತ್ರಗಳ ವಿಶ್ಲೇಷಣೆ ಮಾಡಿತ್ತು. ಈ 215ರಲ್ಲಿ 113 ಅಭ್ಯರ್ಥಿಗಳು ಬಿ.ಜೆ.ಪಿ.; 70 ಅಭ್ಯರ್ಥಿಗಳು ಐ.ಎನ್.ಸಿ, 26 ಅಭ್ಯರ್ಥಿಗಳು ಜೆ.ಡಿ.(ಎಸ್) ಹಾಗೂ 6 ಸ್ವತಂತ್ರ ಅಭ್ಯರ್ಥಿಗಳಾಗಿದ್ದರು.

***ಗಮನಿಸಿ: ಈ ವಿಶ್ಲೇಷಣೆಯು 2008ರಲ್ಲಿ ಅಭ್ಯರ್ಥಿಗಳು ಇತ್ತಿರುವ ಸ್ವಯಂಘೋಷಣಾ ಮಾಹಿತಿಯನ್ನು ಆಧರಿಸಿದೆ. ಆ ನಂತರ ಕೆಲವು ಶಾಸಕರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರಬಹುದು ಅಥವಾ ಪಕ್ಷ ಬದಲಾಯಿಸಿರಬಹುದು. ತೀರಾ ಇತ್ತೀಚಿನ ಆಸ್ತಿ, ಸಾಲ ವಿವರ, ಮತ್ತು ಅಪರಾಧಿಕ ಮೊಕದ್ದಮ್ಮೆಗಳು ಈಗ ಲಭ್ಯವಿಲ್ಲ. ಆದಾಗ್ಯೂ, 2008ರಲ್ಲಿ ಅಭ್ಯರ್ಥಿಗಳೇ ನೀಡಿದ್ದ ಮಾಹಿತಿ ಆಧರಿಸಿ ಈ ವಿಶ್ಲೇಷಣೆಯನ್ನು ಮಾಡಲಾಗಿದೆ.***

## ಹಣಕಾಸು:

- **ಕೋಟ್ಯಧಿಪತಿ ಶಾಸಕರು:** ಶಾಸಕರ ಸ್ವಯಂಘೋಷಣಾ ಪತ್ರಗಳ ವಿಶ್ಲೇಷಣೆಯಲ್ಲಿ ಕಂಡುಬಂದದ್ದು ಒಟ್ಟು 215ರಲ್ಲಿ 131 ಅಭ್ಯರ್ಥಿಗಳು ಕೋಟ್ಯಧಿಪತಿಗಳು– 61%
- **ಶಾಸಕರ ಸರಾಸರಿ ಆಸ್ತಿ:** ಕರ್ನಾಟಕದ ಶಾಸಕರ ಸರಾಸರಿ ಆಸ್ತಿ **ರೂ.5.9 ಕೋಟಿ.** (ಇದರಲ್ಲಿ ಗೋವಿಂದರಾಜ ನಗರದಿಂದ ಚುನಾಯಿತರಾಗಿರುವ ಐ.ಎನ್.ಸಿ.ಯ **ಪ್ರಿಯಾ ಕೃಷ್ಣ** ಅವರ ಆಸ್ತಿ ರೂ.767 ಕೋಟಿಗಳಿಗಿಂತಲೂ ಹೆಚ್ಚಾಗಿರುವುದೆಂದು ಘೋಷಿಸಿಕೊಂಡಿರುವುದು ಸಮರ್ಥವಾಗಿಲ್ಲದ ಕಾರಣ ಅದನ್ನು ಇಲ್ಲಿ ಪರಿಗಣಿಸಲಾಗಿಲ್ಲ).
- **ಪಕ್ಷವಾರು ಆಸ್ತಿಯ ಸರಾಸರಿ[1] :** ಪ್ರಮುಖ ರಾಜಕೀಯ ಪಕ್ಷಗಳಲ್ಲಿ, ಐ.ಎನ್.ಸಿ.ಯು ಅತ್ಯಂತ ಹೆಚ್ಚಿನ ಸರಾಸರಿ ಆಸ್ತಿ ರೂ.9.5 ಕೋಟಿ ಹೊಂದಿರುವ ಶಾಸಕರನ್ನು ಪಡೆದಿದೆ; ನಂತರ ರೂ. 4.4. ಕೋಟಿಯೊಂದಿಗೆ ಜೆ.ಡಿ.(ಎಸ್) ಶಾಸಕರಿದ್ದಾರೆ ನಂತರದ ಸ್ಥಾನ ಬಿ.ಜೆ.ಪಿ.ಯ ಶಾಸಕರು ಸರಾಸರಿ ರೂ. 4.3 ಕೋಟಿ.
- **ಅತ್ಯಂತ ಶ್ರೀಮಂತ ಶಾಸಕರು:** ಅತ್ಯಂತ ಶ್ರೀಮಂತ ಪ್ರಥಮ ಮೂವರು ಶಾಸಕರು ಈ ಮುಂದಿನಂತಿದ್ದಾರೆ: ಪ್ರಿಯಾ ಕೃಷ್ಣ (ಐ.ಎನ್.ಸಿ; ಗೋವಿಂದರಾಜನಗರ) – ರೂ. 767 ಕೋಟಿಗಳು; ಎಂ.ಕೃಷ್ಣಪ್ಪ (ಐ.ಎನ್.ಸಿ.; ವಿಜಯನಗರ) – ರೂ. 129 ಕೋಟಿಗಳು ಮತ್ತು ಎನ್.ಎ.ಹ್ಯಾರಿಸ್ (ಐ.ಎನ್.ಸಿ; ಶಾಂತಿನಗರ) – ರೂ. 85 ಕೋಟಿಗಳು
- **ಅತ್ಯಂತ ಕಡಿಮೆ ಆಸ್ತಿ ಹೊಂದಿರುವ ಕೊನೆಯ ಮೂವರು ಶಾಸಕರು:** 'ಬಿ.ರಮಾನಾಥ ರೈ (ಐ.ಎನ್.ಸಿ; ಬಂಟ್ವಾಳ) ಅತ್ಯಂತ ಕಡಿಮೆ ಆಸ್ತಿ ಘೋಷಿಸಿಕೊಂಡಿದ್ದಾರೆ ರೂ. 1.71 ಲಕ್ಷ; ಅವರ ನಂತರ ಆರ್. ವರ್ತೂರು ಪ್ರಕಾಶ್, (ಸ್ವತಂತ್ರ ಶಾಸಕರು, ಕೋಲಾರ) ರೂ. 2 ಲಕ್ಷ ಮತ್ತು ಗೂಳಿಹಟ್ಟಿ ಶೇಖರ್ (ಸ್ವತಂತ್ರ ಶಾಸಕರು, ಹೊಸದುರ್ಗ) – ರೂ. 4.1 ಲಕ್ಷ.
- **ಅತ್ಯಂತ ಹೆಚ್ಚು ಸುಸ್ತಿ/ಸಾಲ ಹೊಂದಿರುವ ಶಾಸಕರು:** ಗೋವಿಂದರಾಜನಗರ ಕ್ಷೇತ್ರದ ಐ.ಎನ್.ಸಿಯ ಪ್ರಿಯಾ ಕೃಷ್ಣ ಅವರ ಸ್ವಯಂಘೋಷಣೆಯಂತೆ ರೂ. 734 ಕೋಟಿಗಳ ಸಾಲವಿದೆ.
- **ಪ್ಯಾನ್ (PAN) ಸಂಖ್ಯೆ ತಿಳಿಸದ ಶಾಸಕರು:** ಒಟ್ಟು 215 ಶಾಸಕರಲ್ಲಿ 86 ಶಾಸಕರು, 40% ಶಾಸಕರು ಆದಾಯ ತೆರಿಗೆಗಾಗಿ ಆವಶ್ಯಕವಾಗಿ ಬೇಕಾದ ಪ್ಯಾನ್ ಸಂಖ್ಯೆ ತಿಳಿಸಿಲ್ಲ.

## ಆಪರಾಧಿಕ ಮೊಕದ್ದಮ್ಮೆಗಳು :

- **ಒಟ್ಟು 215 ಶಾಸಕರಲ್ಲಿ 41 ಶಾಸಕರು (19%) ತಮ್ಮ ಮೇಲೆ ವಿವಿಧ ಮೊಕದ್ದಮ್ಮೆಗಳು ಇವೆ ಎಂದು ತಿಳಿಸಿದ್ದಾರೆ. 215ರಲ್ಲಿ 16 ಶಾಸಕರ ಮೇಲೆ (7%) ತೀವ್ರತರವಾದ ಆಪರಾಧಿಕ ಕೃತ್ಯಗಳನ್ನೆಸಗಿದ ಆರೋಪದ ಪ್ರಕರಣಗಳು ನ್ಯಾಯಾಲಯದಲ್ಲಿದೆ ಎಂದು ತಿಳಿಸಿದ್ದಾರೆ.**
- **ಆಪರಾಧಿಕ ಮೊಕದ್ದಮ್ಮೆಗಳಿವೆ ಎಂದು ಹೇಳಿರುವ 41 ಶಾಸಕರಲ್ಲಿ 26 ಶಾಸಕರು ಬಿ.ಜೆ.ಪಿಯವರು; 8 ಐ.ಎನ್.ಸಿ. ಶಾಸಕರು, 5 ಜೆ.ಡಿ (ಎಸ್) ಶಾಸಕರು ಮತ್ತು ಇಬ್ಬರು ಸ್ವತಂತ್ರ ಶಾಸಕರು. ತೀವ್ರತರವಾದ ಅಪರಾಧಗಳ ಮೊಕದ್ದಮ್ಮೆ ಎದುರಿಸುತ್ತಿರುವವರಲ್ಲಿ 10 ಬಿ.ಜೆ.ಪಿ. ಶಾಸಕರು, 4 ಐ.ಎನ್.ಸಿ. ಶಾಸಕರು ಮತ್ತು ಇಬ್ಬರು ಜೆ.ಡಿ. (ಎಸ್) ಶಾಸಕರು[2].**

---

[1] ಈ ಮಾಹಿತಿ 2008ರ ಚುನಾವಣಾ ಸಮಯದಲ್ಲಿ ಅಭ್ಯರ್ಥಿಗಳು ನೀಡಿದ್ದ ಸ್ವಯಂಘೋಷಣಾ ಪತ್ರಗಳಿಂದ ವಿಶ್ಲೇಷಿಸಲಾಗಿದೆ. ಆ ನಂತರ ಶಾಸಕರು ರಾಜೀನಾಮೆ ಕೊಟ್ಟಿರಬಹುದು, ಪಕ್ಷ ಬದಲಾಯಿಸಿರಬಹುದು ಮತ್ತು ಬದಲಾವಣೆಗಳು ಆಗಿರಬಹುದು.

**ಇತರ ವಿವರಗಳು (ಶಿಕ್ಷಣ, ಲಿಂಗ, ಇತ್ಯಾದಿ)**

- **ಶಾಸಕರ ಶಿಕ್ಷಣ:** 2008ರ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳಲ್ಲಿ 215 ಶಾಸಕರಲ್ಲಿ **97 ಮಂದಿ 945%) ಪದವೀದರರು ಅಥವಾ ಇನ್ನೂ ಹೆಚ್ಚಿನ ಪದವಿ ಹೊಂದಿದ್ದರು.**
- **ಮಹಿಳಾ ಶಾಸಕರು:** ಒಟ್ಟು 215 ಶಾಸಕರಲ್ಲಿ ಇಬ್ಬರು ಮಾತ್ರ ಮಹಿಳೆಯರು
- **ಶಾಸಕರ ವಯಸ್ಸು: 215 ಶಾಸಕರಲ್ಲಿ 80 ಶಾಸಕರು (37%) 41ರಿಂದ 50 ವರ್ಷದ ಮಿತಿಯವರು. 5 ಶಾಸಕರು 25–30 ವರ್ಷದ ಗುಂಪಿನಲ್ಲಿದ್ದಾರೆ.**

[2] ಈ ಮಾಹಿತಿ 2008ರ ಚುನಾವಣಾ ಸಮಯದಲ್ಲಿ ಅಭ್ಯರ್ಥಿಗಳು ನೀಡಿದ್ದ ಸ್ವಯಂಘೋಷಣಾ ಪತ್ರಗಳಿಂದ ವಿಶ್ಲೇಷಿಸಲಾಗಿದೆ. ಆ ನಂತರ ಶಾಸಕರು ರಾಜೀನಾಮೆ ಕೊಟ್ಟಿರಬಹುದು, ಪಕ್ಷ ಬದಲಾಯಿಸಿರಬಹುದು ಮತ್ತು ಬದಲಾವಣೆಗಳು ಆಗಿರಬಹುದು.